ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸಿಂದಗಿ

ಕ್ರಿಮಿನಲ್ ಕೇಸ್ ನಂ.2415/2022

ಸಿ.ಡಬ್ಲ್ಯೂ:2 ಪಿ.ಡಬ್ಲ್ಯೂ:1

ಸಾಕ್ಷಿಗೆ ದಿನಾಂಕ 21/12/2023 ರಂದು ಪ್ರಮಾಣಿಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಮಹಾದೇವಿ |
| ತಂ/ಗಂ. ಹೆಸರು | ವಸಂತ ಚವಾಣ |
| ವಯಸ್ಸು | 38 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಕೆರುಟಗಿ |

ಮುಖ್ಯ ವಿಚಾರಣೆ : ಶ್ರೀ ಎಪಿಪಿ ಯವರಿಂದ

ಚಾ ಸಾ 1 ನನ್ನ ಗಂಡ. ಉಳಿದ ಸಾಕ್ಷಿದಾರರ ಪರಿಚಯ ಇದೆ. ಹಂದಿಗನೂರ ಗ್ರಾಮದ ನಮ್ಮ ಜಮೀನು ಇದ್ದು ಅದರ ಸರ್ವೇ ನಂಬರ 222 ಇರುತ್ತದೆ. ನಮ್ಮ ಜಮೀನಿನ ಪಕ್ಕಕ್ಕೆ ಆರೋಪಿ 1 ಇತನ ಜಮೀನು ಇದೆ. 2 ವರ್ಷಗಳ ಹಿಂದೆ ನಾನು ನನ್ನ ಜಮೀನದಲ್ಲಿ ನಾನು ನನ್ನ ಗಂಡ ಚಾ ಸಾ 5 ರಿಂದ 7 ರವರು ಸೇರಿ ಕಸ ತೆಗೆಯುತ್ತಿದ್ದೇವು. ಆಗ ಸಂಜೆ 5 ಗಂಟೆ ಆಗಿತ್ತು. ಆರೋಪಿ 1 ಆಗ ಬಂದ ಆತನ ಹಿಂದೆ 2 ನೇ ಆರೋಪಿತಳು ಬಂದಿರುತ್ತಾಳೆ. ಆರೋಪಿ 2 ಬಂದು ನನ್ನ ಕಿವಿಯ ಗಡ್ಡಿಯ ಹತ್ತಿರ ಹೊಡೆದಿರುತ್ತಾಳೆ. ಜಮೀನಿನಲ್ಲಿ ದನಕರ ಏಕೆ ಕಟ್ಟಿರುವಿರಿ ಅದು ಜಮೀನು ನಮ್ಮದು ಇದೆ ಎಂದು ಹೇಳಿ ಜಗಳ ತೆಗೆದಿದ್ದಳು. ಆರೋಪಿ 1 ಇತ ಚಾ ಸಾ 1 ಇತನಿಗೆ ಎದೆಗೆ, ಡುಬ್ಬಕ್ಕೆ,ಕೈಯಿಂದ ಮುಷ್ಠಿ ಮಾಡಿ ಹೊಡೆದಿರುತ್ತಾನೆ. ನಾನು ಜಗಳ ಬಿಡಿಸಲು ಹೊದಾಗ 1 ನೇ ಆರೋಪಿ ಇತನು ನನಗೆ ಕುದುಲು ಹಿಡಿದು ಜಗ್ಗಾಡಿ ಕೆಳಗಡೆ ಬಿಳಿಸಿ ನನ್ನ ಎದೆಯ ಮೇಲೆ ಕುಳಿತು ಜಗ್ಗಾಡಿರುತ್ತಾನೆ. ಚಾ ಸಾ 5 ರಿಂದ 7 ಇವರು ಗಲಾಟೆಯನ್ನು ಬಿಡಿಸಿರುತ್ತಾರೆ.

ನಂತರ ಕಲಕೇರಿ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ನಂತರ ಅಲ್ಲೆ ಖಾಸಗಿ ಆಸ್ಪತ್ರೆಗೆ ತೋರಿಸಿ ಹೆಚ್ಚಿನ ಚಿಕಿತ್ಸೆಗಾಗಿ ವಿಜಯಪೂರದ ಆಸ್ಪತ್ರೆಗೆ ಹೋಗಿರುತ್ತೇವೆ. ನಂತರ ಮನೆಗೆ ಹೋಗಿ ಹಣ ತೆಗೆದುಕೊಂಡು ವಿಜಯಪೂರ ಆಯುಷ ಆಸ್ಪತ್ರೆಗೆ ಹೋಗಿರುತ್ತೇವೆ. ನಂತರ ನನ್ನ ಗಂಡ ಬಂದು ಆರೋಪಿತರ ವಿರುದ್ದ ದೂರನ್ನು ದಾಖಲು ಮಾಡಿರುತ್ತಾರೆ. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಆರೋಪಿ 1 ಮತ್ತು 2 ಇವರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

( ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಭಾಗಶ ಪ್ರತಿಕೂಲಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅದಕ್ಕೆ ಆರೋಪಿ ಪರ ವಕೀಲರು ಯಾವುದೇ ತಕರಾರು ವ್ಯಕ್ತಪಡಿಸದ ಕಾರಣ ಮತ್ತು ಸಾಕ್ಷಿಯು ಪ್ರತ್ಯೇಕ್ಷ ಸಾಕ್ಷಿಯಾಗಿದ್ದು ಸಂಪೂರ್ಣವಾಗಿ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದರಿಂದ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

ಪಾಟೀ ಸವಾಲು : ಎ.ಪಿ.ಪಿ. ಯವರಿಂದ

ಸರ್ವೇ ನಂಬರ 223 1 ನೇ ಆರೋಪಿತನ ತಂದೆಯ ಹೆಸರಿನಲ್ಲಿ ಎಂದರೆ ನಿಜ. ಅದು ನಮ್ಮ ಜಮೀನಿನ ಪಕ್ಕದಲ್ಲಿದೆ ಎಂದರೆ ನಿಜ. ದಿನಾಂಕ 02-11-2021 ರಂದು ನಾನು ನನ್ನ ಗಂಡ ಮತ್ತು ಚಾ ಸಾ 6 ರವರ ಸೇರಿ ಜಮೀನಿನಲ್ಲಿ ಕಸ ತೆಗೆಯುತ್ತಿದ್ದೇವು ಎಂದರೆ ನಿಜ. ಆಗ ಸಂಜೆ 4 ಗಂಟೆ ಸಮಯ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ದನಗಳನ್ನು ಏಕೆ ಕಟ್ಟಿರುತ್ತೀರಿ ಅಂತಾ ಹೇಳಿ ಆರೋಪಿತರು ರಂಡಿ ಎಂದು ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ನಿಜ. ಸದರಿ ಒಡ್ಡು ನಮ್ಮದು ಇದೆ ಎಂದು ಆರೋಪಿತರು ಅದು ನಮಗೆ ಹಿರಿಯರಿಂದ ಬಂದಿದೆ ಎಂದು ನಾವು ವಾದ ಮಾಡಿದ್ದೇವು ಎಂದರೆ ನಿಜ. ಆಗ 2 ನೇ ಆರೋಪಿ ಕೈಯಿಂದ ನನ್ನ ಕಪಾಳಕ್ಕೆ ಹಲ್ಲೆ ಮಾಡಿರುತ್ತಾಳೆ ಎಂದರೆ ನಿಜ. 1 ನೇ ಆರೋಪಿ ಮುಷ್ಠಿ ಮಾಡಿ ನನ್ನ ಎದೆಗೆ ಮುಖಕ್ಕೆ, ಹೊಟ್ಟೆಗೆ ಗುದ್ದಿರುತ್ತಾನೆ ಎಂದರೆ ನಿಜ. ಮುಂಗೈಯಿಂದ ಬೆನ್ನಿಗೆ ಹೊಡೆದಿದ್ದರಿಂದ ನಾನು ಕೆಳಗಡೆ ಬಿದ್ದಿರುತ್ತೇನೆ ಎಂದರೆ ನಿಜ. ನಾನು ಕೆಳಗಡೆ ಬಿದ್ದಾಗ 1 ನೇ ಆರೋಪಿ ನನ್ನ ತಲೆಯ ಕುದುಲು ಹಿಡಿದು ಜಗ್ಗಾಡಿರುತ್ತಾನೆ ಎಂದರೆ ನಿಜ.

ಆಗ ಜಗಳ ಬಿಡಿಸಲು ನನ್ನ ಗಂಡ ಬಂದಾಗ ಮುಖಕ್ಕೆ ಹೊಡೆದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ನಿಜ. ಕಾಲಿನಿಂದ ಒದ್ದಿರುತ್ತಾನೆ ಎಂದರೆ ನಿಜ. ಅಲ್ಲೆ ಇದ್ದ ಚಾ ಸಾ 5 ರಿಂದ 7 ರವರು ಜಗಳ ಬಿಡಿಸಿರುತ್ತಾರೆ ಎಂದರೆ ನಿಜ. ನಂತರ ನಾವು ಕಲಕೇರಿ ಆಸ್ಪತ್ರೆಗೆ ಹೋಗಿ ನಂತರ ಅಲ್ಲಿಂದ ವಿಜಯಪೂರಕ್ಕೆ ಹೋಗಿರುತ್ತೇವೆ ಎಂದರೆ ನಿಜ. ಆಸ್ಪತ್ರೆಯಿಂದ ಬಂದ ವಿಚಾರಣೆ ಮಾಡಿ ದಿನಾಂಕ 20-11-2021 ರಂದು ತಡವಾಗಿ ದೂರನ್ನು ದಾಖಲು ಮಾಡಿರುತ್ತಾರೆ ಎಂದರೆ ನಿಜ.

**ಪಾಟೀ ಸವಾಲು ಶ್ರೀ ಪಿ ಎಸ್ ಬಿ ವಕೀಲರಿಂದ**

ನಮ್ಮ ಜಮೀನು ಮತ್ತು ಆರೋಪಿತರ ಜಮೀನು ಅಕ್ಕಪಕ್ಕದಲ್ಲಿವೆ ಎಂದರೆ ನಿಜ. ಆರೋಪಿ 1 ಕೆಲಸದ ನಿಮಿತ್ಯ ಚಿಕ್ಕೊಡಿಯಲ್ಲಿ ವಾಸವಾಗಿರುತ್ತಾನೆ ಎಂದರೆ ನಿಜ. ಆತ 2 ತಿಂಗಳಿಗೆ ಒಂದು ಸಲ ಊರ ಕಡೆಗೆ ಬರುತ್ತಾನೆ ಎಂದರೆ ಹೆಚ್ಚಿಗೆ ಬರುತ್ತಾರೆ ಎಂದು ಹೇಳುತ್ತಾರೆ. ನಾನು ಆಸ್ಪತ್ರೆಯಲ್ಲಿ 1 ತಿಂಗಳವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಆಸ್ಪತ್ರೆಯಲ್ಲಿದ್ದಾಗ ನನ್ನ ಗಂಡ ಬಂದು ದೂರನ್ನು ದಾಖಲು ಮಾಡಿರುತ್ತಾನೆ. ಪೋಲಿಸರು ನಾನು ಆಸ್ಪತ್ರೆಯಲ್ಲಿದ್ದಾಗ ನನ್ನ ಹೇಳಿಕೆ ದೂರನ್ನು ಪಡೆದಿರುತ್ತಾರೆ. ನಾನು ಆಯುಷ ಆಸ್ಪತ್ರೆಯಲ್ಲಿದ್ದಾಗ ನನ್ನ ಹೇಳಿಕೆ ಪಡೆದಿರುತ್ತಾರೆ. ಗಲಾಟೆ ನಡೆದ ಎಷ್ಟನೆ ದಿನಕ್ಕೆ ಪೋಲಿಸರು ಆಸ್ಪತ್ರೆಗೆ ಬಂದಿದ್ದರು ನನಗೆ ಗೊತ್ತಿಲ್ಲ. ಸದರಿ ನಾನು ಆಸ್ಪತ್ರೆಯಲ್ಲಿದ್ದಾಗ ಪೋಲಿಸರು ಬಂದು ನನ್ನ ಹೇಳಿಕೆ ಪಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರು ಊರಿನಲ್ಲಿ ಇರದ ಕಾರಣ ಅವರ ಒಡ್ಡಿನ ಮೇಲೆ ದನಕರಗಳನ್ನು ಬಿಟ್ಟು ಅವರ ಬೆಳೆಗಳನ್ನು ನಾಶಪಡಿಸಿದ್ದರಿಂದ ಹಿರಿಯರ ಮೂಲಕ ಪಂಚಾಯತ ಮಾಡಿ ನಮಗೆ ತಿಳುವಳಿಕೆ ಹೇಡಿದ್ದರು ಎಂದರೆ ಸರಿಯಲ್ಲ. ನಾನು ಆರೋಪಿತರು ಬಂದು ಹೊಡಿ ಬಡಿ ಮಾಡಿ ನನ್ನ ಹೆಣ್ಣುತನಕ್ಕೆ

ಅವಮಾನಪಡಿಸಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾ ಸಾ 6 ಮತ್ತು 7 ರವರು ಬಂದು ಗಲಾಟೆ ಬಿಡಿಸಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆರೋಪಿತರು ಊರಿನಲ್ಲಿ ಇರದ ಕಾರಣ ಗೈರು ಪಾಯಿದೆ ತೆಗೆದುಕೊಂಡು ನನ್ನ ಗಂಡನ ಮೂಲಕ ಸುಳ್ಳು ದೂರನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪಿರ್ಯಾದಿ ಕೊಡಲು ನನ್ನ ಗಂಡ ಘಟನೆಯಾದ 5 ದಿನಕ್ಕೆ ಹೋಗಿರುತ್ತಾನೆ. ಘಟನೆಯಾದ 5ನೇ ದಿನಕ್ಕೆ ನನ್ನ ಗಂಡ ದೂರು ಕೊಡಲು ಹೋಗಿರುತ್ತಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯಾದಾಗ ಆರೋಪಿತರ ಜಮೀನಿನಲ್ಲಿ ಬೇರೆ ಯಾರು ಇದ್ದಿರಲಿಲ್ಲ. ನಮ್ಮ ಜಮೀನಿನಲ್ಲಿ ನಾನು ಚಾ ಸಾ 1, 5 ರಿಂದ 7 ರವರು ಇದ್ದರು. ಸದರಿ ಸಾಕ್ಷಿದಾರರು ಅಲ್ಲೆ ಜಮೀನಿನಲ್ಲಿ ಕೆಲಸಕ್ಕೆ ಇದ್ದರು.

ಘಟನೆ ಸಂಜೆ 4 ಗಂಟೆಗೆ ಆಗಿದೆ ಆಸ್ಪತ್ರೆಗೆ ಸಂಜೆ 5 ಗಂಟೆಗೆ ಹೋಗಿರುತ್ತೇನೆ. ಘಟನೆಯಾದ ಸಮಯ ಮತ್ತು ಆಸ್ಪತ್ರೆಗೆ ಹೋದ ಸಮಯ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆ ನಡೆದ ಸ್ಥಳದ ಚೆಕ್ಕಬಂದಿ ಪೂರ್ವಕ್ಕೆ ಬಾಬು ಚವಾಣ, ಪಶ್ಚಿಮಕ್ಕೆ ಮೋಹನ ರಾಠೋಡ, ಉತ್ತರಕ್ಕೆ ರವಿ ಚವಾಣ ಮತ್ತು ದಕ್ಷಿಣಕ್ಕೆ ಲಕ್ಷ್ಮಿಬಾಯಿ ಚವಾಣ ಇರುತ್ತಾರೆ. ನಾನು ಆಸ್ಪತ್ರೆಯಲ್ಲಿದ್ದಾಗಲೇ ಪಂಚನಾಮೆ ಮಾಡಿಕೊಂಡು ಹೋಗಿರುತ್ತಾರೆ. ಪಂಚನಾಮೆ ಸಮಯಕ್ಕೆ ತೆಗೆದ ಭಾವ ಚಿತ್ರದಲ್ಲಿ ಯಾವುದೇ ಬೆಳೆ ಕಂಡು ಬರುವುದಿಲ್ಲ ಎಂದರೆ ನಿಜ. ಆ ಸಮಯದಲ್ಲಿ ಆರೋಪಿತರ ಜಮೀನಿನಲ್ಲಿ ತೆಗೆರಿ ಬೆಳೆ ಇತ್ತು ಎಂದರೆ ನಿಜ. ನಮ್ಮ ದನಕರುಗಳು ಆರೋಪಿತನ ಜಮೀನಿನಲ್ಲಿ ಮೇಯಿಸಬೇಡಿ ಅಂದಿದ್ದಕ್ಕೆ ಚಾ ಸಾ3 ರವರ ಮಾತು ಕೇಳಿ ಸುಳ್ಳು ದೂರು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ